**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಏಳನೇ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 19)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಸಿ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 94ಸಿ ಪ್ರಕರಣದ (viಇ) ಖಂಡದಲ್ಲಿ, "2400 ಚದರ ಅಡಿಯವರೆಗೆ" ಎಂಬ ಅಂಕಿಗಳು ಮತ್ತು ಪದಗಳಿಗೆ "4000 ಚದರ ಅಡಿಯವರೆಗೆ" ಎಂಬ ಅಂಕಿಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 95ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 95ನೇ ಪ್ರಕರಣದಲ್ಲಿ,–

(1) (5)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(5) (2)ನೇ ಉಪಪ್ರಕರಣದ ಅಡಿಯಲ್ಲಿ ನೀಡಲಾದ ಅರ್ಜಿಯ ಕುರಿತು,–

(ಎ) ಭೂಮಿಯ ವಿಸ್ತೀರ್ಣವು ಇಪ್ಪತ್ತು ಗುಂಟೆ ಮತ್ತು ಕಡಿಮೆ ಇದ್ದಲ್ಲಿ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಜಿಲ್ಲಾಧಿಕಾರಿಯು ಅರ್ಜಿದಾರನಿಗೆ ತನ್ನ ನಿರ್ಧಾರವನ್ನು ತಿಳಿಸಲು ವಿಫಲನಾದರೆ, ಸಲ್ಲಿಸಲಾದ ಅನುಮತಿಯು ಮಂಜೂರಾಗಿದೆ ಎಂದು ಭಾವಿಸತಕ್ಕದ್ದು; ಮತ್ತು

(ಬಿ) ಭೂಮಿಯ ವಿಸ್ತೀರ್ಣವು ಇಪ್ಪತ್ತು ಗುಂಟೆಗಿಂತ ಹೆಚ್ಚಾಗಿದ್ದಲ್ಲಿ, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ತಿಂಗಳೊಳಗೆ, ಜಿಲ್ಲಾಧಿಕಾರಿಯು ಅರ್ಜಿದಾರನಿಗೆ ತನ್ನ ನಿರ್ಧಾರವನ್ನು ತಿಳಿಸಲು ವಿಫಲನಾದರೆ, ಸಲ್ಲಿಸಲಾದ ಅನುಮತಿಯು ಮಂಜೂರಾಗಿದೆ ಎಂದು ಭಾವಿಸತಕ್ಕದ್ದು.

ಪರಂತು, ಭಾವಿತ ಪರಿವರ್ತನೆಯ ಸಂದರ್ಭದಲ್ಲಿ ಅರ್ಜಿದಾರನು ಅಥವಾ ಭೂಮಿಯ ಮಾಲೀಕನು ಪರಿವರ್ತನೆ ಶುಲ್ಕವನ್ನು ಮತ್ತು ವಿಧಿಸಬಹುದಾದ ಎಲ್ಲಾ ಅಂಥ ಇತರ ಶುಲ್ಕಗಳನ್ನು, ನಿಯಮಿಸಲಾದ ಅವಧಿಯೊಳಗೆ ಅನುಮತಿಯು ಮಂಜೂರಾದ ರೀತಿಯಲ್ಲಿಯೇ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) (9)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(10) ಗರಿಷ್ಠ ಹತ್ತು ಗುಂಟೆಗಳಿಗೆ ಒಳಪಟ್ಟು, ವಾಸ್ತವಿಕ ಕೃಷಿ ಉದ್ದೇಶಕ್ಕಾಗಿ ಬಳಸಲಾದ ಹಿಡುವಳಿಯ ಶೇಕಡಾ ಹತ್ತರಷ್ಟನ್ನು ವಿನಾಯಿತಿಸುವುದು. ವಿನಾಯಿತಿಸಿದ ಅಂಥ ಭೂಮಿಯನ್ನು ವಿಶೇಷವಾಗಿ ತೋಟದ ಮನೆ (Farm House) ನಿರ್ಮಾಣಕ್ಕಾಗಿ ಬಳಸತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ "ತೋಟದ ಮನೆ" ಎಂದರೆ, ರೈತನ ವಸತಿಗಾಗಿ ಬಳಸಲಾದ ಅಥವಾ ಕೃಷಿ ಪರಿಕರಗಳನ್ನು ಇಡುವ ಉದ್ದೇಶಕ್ಕಾಗಿ ಬಳಸಲಾದ ಮತ್ತು ಜಾನುವಾರುಗಳನ್ನು ಕಟ್ಟಿಹಾಕಲು ಕೃಷಿ ಭೂಮಿಯ ಭಾಗದಲ್ಲಿ ನಿರ್ಮಾಣ ಮಾಡಲಾದ ಜಮೀನಿಗೆ ಹೊಂದಿಕೊಂಡಿರುವ ಮನೆ ಮತ್ತು ಈ ಮನೆಯು ರೈತನಿಂದ ತನ್ನ ಸ್ವಂತ ಉಪಯೋಗಕ್ಕಾಗಿ ಬಳಸತಕ್ಕದ್ದು ಮತ್ತು ಯಾವುದೇ ವ್ಯಕ್ತಿ ಅಥವಾ ಏಜೆನ್ಸಿಯ ವಾಣಿಜ್ಯ ಚಟುವಟಿಕೆಗಳಿಗೆ ನೀಡತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣವನ್ನು ತಿದ್ದುಪಡಿ ಮಾಡಿದ ಹಿನ್ನಲೆಯಲ್ಲಿ, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಸರ್ಕಾರಿ ಭೂಮಿಯಲ್ಲಿ ವಾಸದ ಮನೆಗಳ ಅಕ್ರಮ ನಿರ್ಮಾಣವನ್ನು ಸಕ್ರಮಗೊಳಿಸುವುದು;

(ii) ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲು ಅನುಮತಿಯನ್ನು ಕೋರಿ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಕಾಲಮಿತಿಯನ್ನು ವಿಸ್ತರಿಸುವುದು;

(iii) ವಿಶೇಷವಾಗಿ ಗದ್ದೆ ಮನೆಯನ್ನು ನಿರ್ಮಿಸುವುದಕ್ಕಾಗಿ ವಾಸ್ತವಿಕವಾಗಿ ಕೃಷಿ ಉದ್ದೇಶಕ್ಕಾಗಿ ಬಳಸಲಾದ ಹಿಡುವಳಿಯ ಶೇಕಡಾ ಹತ್ತರಷ್ಟನ್ನು ವಿನಾಯಿತಿ ನೀಡುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಶ್ರೀನಿವಾಸ ಪ್ರಸಾದ್**
ಕಂದಾಯ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಉದ್ಧೃತ ಭಾಗ

XXX XXX XXX

**94ಸಿ. ಆಕ್ರಮಿತ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.–**

XXX XXX XXX

(vi ಇ) 2400 ಚದರ ಅಡಿಯವರೆಗೆ ಕಟ್ಟಿದ ಮನೆ ಅಥವಾ ಕಟ್ಟಡ ಪ್ರದೇಶದ ವಾಸ್ತವಿಕವಾಗಿ ಆಕ್ರಮಿತವಾದ ಪ್ರದೇಶ ಅದರಲ್ಲಿ ಯಾವುದು ಕಡಿಮೆಯೋ ಅದನ್ನು ಸಕ್ರಮಗೊಳಿಸತಕ್ಕದ್ದು."

XXX XXX XXX

**95. ಬೇಸಾಯದ ಭೂಮಿಯ ಉಪಯೋಗಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಉಪಯೋಗಿಸುವ ಬಗೆಗಿನ ವಿಧಾನ.–** XXX XXX XXX

(5) (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಮೇಲೆ, ಅರ್ಜಿಯು ತಲುಪಿದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ ಡೆಪ್ಯುಟಿ ಕಮಿಷನರು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, ಕೇಳಿಕೊಂಡ ಅನುಮತಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

XXX XXX XXX

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಪಿ7, ಕಾಸೂ , 750–ಪ್ರತಿಗಳು 7ನೇ ಜುಲೈ, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**SEVENTH SESSION**

# THE KARNATAKA LAND REVENUE (AMENDMENT) BILL, 2015
## (L.A. Bill No. 19 of 2015)

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty-sixth year of the Republic of India, as follows:-

**1. Short title and commencement**.- (1) This Act may be called the Karnataka Land Revenue (Amendment) Act, 2015.

(2) It shall come into force at once.

**2. Amendment of section 94C.-** In section 94C of the Karnataka Land Revenue Act, 1964 (Karnataka Act 12 of 1964) (hereinafter referred to as the principal Act), in clause (vie), for the words and figures "upto 2,400 sq.feet", the words and figures "upto 4,000 sq.feet" shall be substituted.

**3. Amendment of section 95.-** In section 95 of the principal Act,-

(1) for sub-section (5), the following shall be substituted, namely:-

"(5)(a) Where the Deputy Commissioner fails to inform the applicant of his decision on the application made under sub-section (2),-

(a) If the extent of land is twenty guntas and below, within a period of two months from the date of receipt of application, the permission applied for shall be deemed to have been granted; and

(b) If the extent of land is more than twenty guntas, within a period of four months from the date of receipt of application, the permission applied for shall be deemed to have been granted.

Provided that in case of deemed conversion the applicant or the land owner is liable to pay conversion fine and all such other fees liable to be levied as if the permission was granted within prescribed time."

(2) after sub-section (9), the following shall be inserted, namely:-

"(10) to exempt ten percent of the holding used for bonafide agriculture purpose subject to a maximum of ten guntas. The land so exempted shall be utilized exclusively for construction of Farm house.

**Explanation**.- For the purpose of this sub-section "Farm house" means a house attached to a farm and constructed in a portion of an agricultural land, used for the residence of the agriculturist or used for the purpose of keeping agricultural equipments and tethering cattle. The house shall be used by farmer for his own use and it shall not be let out for commercial activities to any individual or agency."

## STATEMENT OF OBJECTS AND REASON

In view of the amended section 109 of the Karnataka Land Reforms Act, 1961, it is considered necessary to amend the Karnataka Land Revenue Act, 1964 to provide for,-

(i) regularization of the unauthorized construction of dwelling houses on Government lands;

(ii) extension of the time limit for receipt of application for the permission of conversion of agriculture land to non agriculture purpose; and

(iii) exemption of ten percent of the holding used for bonafide agriculture purpose exclusively for construction of farm house.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**V. SRINIVASA PRASAD**
Minister for Revenue

**M. GURURAJA**
Secretary
Karnataka Legislative Assembly

**ANNEXURE**

**EXTRACT FROM THE KARNATAKA LAND REVENUE ACT, 1964**

**(KARNATAKA ACT 12 OF 1964)**

**XX XX XX**

**94C. Grant of Land in case of construction of dwelling housein occupied land.-**

**XX XX XX**

(vie) The area actually occupied by the built up house or built up area upto 2,400 sq.feet whichever is less shall be regularized.

**XX XX XX**

**95. Uses of agricultural land and the procedure for use of agricultural land for other purpose.— XX XX XX**

(5) Where the Deputy Commissioner fails to inform the applicant of his decision on the application made under sub-section (2) within a period of four months, from the date of receipt of the application, the permission applied for shall be deemed to have been granted.

**XX XX XX**

Government Press, Suvarna Soudha, Belagavi, P7, W.D. , Copies 750, 7th July, 2015